ದಿಃ 18-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಎದುರುದಾರರ ಪರ ಶ್ರೀ. **SJG** ಪರವಾಗಿ **RMS** ವಕೀಲರಿಂದ:

ನಾನು 1 ನೇ ಪಿಯುಸಿ ವರೆಗೆ ಓದಿರುತ್ತೇನೆ. ನಾನು ಅರ್ಜಿಯನ್ನು ಆಂಗ್ಲ ಭಾಷೆಯಲ್ಲಿ ಸಲ್ಲಿಸಿರುತ್ತೇನೆ. ಅರ್ಜಿಯ ಎಲ್ಲಾ ಸಂಗತಿಗಳು ಗೊತ್ತಿರುತ್ತವೆ. ದಿಃ 31-03-2019 ರಂದು ನಮ್ಮ ಮದುವೆ ಆಗಿರುತ್ತದೆ. ನಾನು ನನ್ನ ಗಂಡನೊಂದಿಗೆ 6 ತಿಂಗಳ ಚೆನ್ನಾಗಿ ಸಂಸಾರ ಮಾಡಿರುತ್ತೇನೆ. ನಾನು ಗಂಡನ ಮನೆಯಲ್ಲಿದ್ದಾಗ ನನ್ನ ಎಲ್ಲಾ ಖರ್ಚು ವೆಚ್ಚಗಳನ್ನು ಎದುರುದಾರನೇ ನೋಡಿಕೊಳ್ಳುತ್ತಿದ್ದನು ಎಂದರೆ ಸರಿ. ಎದುರುದಾರನ ತಂದೆ ತಾಯಿ ವಯಸ್ಕರಾದವರು ಇದ್ದು ಅವರ ಆಸ್ಪತ್ರೆ ಖರ್ಚು ವೆಚ್ಚಗಳನ್ನು ಸಹ ಎದುರುದಾರನೇ ನೋಡಿಕೊಳ್ಳುತ್ತಿದ್ದನು ಎಂದರೆ ಸರಿ. ಎದುರುದಾರನು ಅವರ ತಂದೆ ತಾಯಿಯನ್ನು ನೋಡಿಕೊಳ್ಳುತ್ತಿದ್ದರಿಂದ ಆತನೊಂದಿಗೆ ನಾನು ಜಗಳ ತೆಗೆಯುತ್ತಿದ್ದೇನು ಎಂದರೆ ಸರಿಯಲ್ಲ. ನಾನು ಎದುರುದಾರನೊಂದಿಗೆ ಜಗಳವಾಡಿ 8 ದಿನಕೊಮ್ಮೆ ತವರುಮನೆಗೆ ಬರುತ್ತಿದ್ದೆ ಎಂದರೆ ಸರಿಯಲ್ಲ. ಈ ಕಾರಣದಿಂದ ರಾಜಿ ಪಂಚಾಯತಿ ಮಾಡಿ ಜೇವರ್ಗಿ ಗ್ರಾಮದಲ್ಲಿ ಬೇರೆ ಮನೆ ವ್ಯವಸ್ಥೆ ಮಾಡಿಕೊಟ್ಟಿದರು ಎಂದರೆ ಸರಿ. ನನ್ನ ತಂದೆ ತಾಯಿಗೂ ಸಹ ಈಗ ವಯಸ್ಸಾಗಿದ್ದು ಮತ್ತು ನನಗೆ ಒಬ್ಬಳು ತಂಗಿ ಇಬ್ಬರು ತಮ್ಮಂದಿರು ಇದ್ದು ಅವರು ವಿಧ್ಯಾಭ್ಯಾಸ ಮಾಡುತ್ತಿದ್ದಾರೆ ಎಂದರೆ ಸರಿ. ನಾನು ಕೂಲಿಮಾಡಿ ಜೀವಿಸುತ್ತಿದ್ದೇನೆ ಎಂದರೆ ಸರಿ. ನಮ್ಮ ತವರುಮನೆಯವರು ಕಷ್ಟದ ಜೀವನ ಸಾಗಿಸುತ್ತಿದ್ದರೂ ಸಹ ನಾವು ಎದುರುದಾರನಿಗೆ ಮದುವೆ ಸಮಯದಲ್ಲಿ 4 ತೊಲೆ ಬಂಗಾರ ಮತ್ತು 1 ಲಕ್ಷ ನೀಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬವರು ಎದುರುದಾರನಿಗೆ ನೀಡಿದ 1 ಲಕ್ಷ ನೀಡಿರುವುದಾಗಿ ನನ್ನ ಮುಖ್ಯವಿಚಾರಣೆಯಲ್ಲಿ ಬರೆಸಿರುತ್ತೇನೆ.

ಈ ಅರ್ಜಿ ಸಲ್ಲಿಸಿದ ನಂತರ ನ್ಯಾಯಾಲಯವು ಮಧ್ಯಸ್ಥಿಕೆ ವಹಿಸಿ ಎದುರುದಾರನಿಗೆ ನನ್ನನ್ನು ಕರೆದುಕೊಂಡು ಹೋಗು ಎಂದು ತಿಳಿಸಿದ್ದರಿಂದ ಆತನು ನಮ್ಮ ಮನೆಗೆ ನನ್ನನ್ನು ಕರೆಯಲು ಬಂದಿರುತ್ತಾನೆ ಎಂದರೆ ಸರಿ. ಆತನ ಕರೆಯಲು ಬಂದಾಗ ನಾವು ಆತನೊಂದಿಗೆ ಜಗಳವಾಡಿ ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ. ಎದುರುದಾರನು ನನಗೆ ದೈಹಿಕ ಮಾನಸಿಕ

ತೊಂದರೆ ನೀಡುತ್ತಾನೆ ಎಂದು ಆತನ ವಿರುದ್ಧ ಪೋಲಿಸ ದೂರು ಯಾಕೆ ನೀಡಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯೂ ಇವತ್ತಿಲ್ಲ ನಾಳೆ ಬದಲಾಗಬಹುದು ಎಂದು ಮತ್ತು ನನ್ನ ಗಂಡನ ಮನೆ ಹೊಲದಲ್ಲಿ ಇರುವುದರಿಂದ ದೂರು ನೀಡಿರುವುದಿಲ್ಲ. ಎದುರುದಾರನ ತಂದೆಗೆ ಉದರ ಕ್ಯಾನ್ಸರ ಆಗಿದರಿಂದ ಅದಕ್ಕೆ ಚಿಕಿತ್ಸೆಯ ಎಲ್ಲಾ ಖರ್ಚುವೆಚ್ಚಗಳನ್ನು ಎದುರುದಾರ ಭರಿಸಿರುತ್ತಾನೆ ಎಂದರೆ ಸಾಕ್ಷಿ ಭರಿಸಿರಬಹುದು ಎಂದು ನುಡಿಯುತ್ತಾರೆ. ಎದುರುದಾರನ ತಾಯಿಗೆ ರಕ್ತದೊತ್ತಡ ಮತ್ತು ಸಕ್ಕರೆ ಕಾಯಿಲೆ ಇರುವುದರಿಂದ ಔಷದ ಉಪಚಾರ ಚಾಲ್ತಿಯಲ್ಲಿರುತ್ತದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಗಂಡನೊಂದಿಗೆ ಜೀವನ ಮಾಡುವ ಇಚ್ಚೆ ಇರುವುದಿಲ್ಲ ಎಂದರೆ ಸರಿಯಲ್ಲ. ಮಾನ್ಯ ನ್ಯಾಯಾಲಯ ಹೇಳಿದರೂ ಸಹ ನಾನು ಗಂಡನ ಮನೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ